ಬೆಂಗಳೂರಿನ ಇ.ಎಸ್.ಐ. ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ

1679- ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿ ಇ.ಎಸ್.ಐ ಕಾನೂನಿಗೆ ಒಳಪಡುವ ಕಾರ್ಮಿಕರ ಸಂಖ್ಯೆ ಎಷ್ಟು?*

ಆ) *ಈ ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯ ಒದಗಿಸಲು ಇರತಕ್ಕ ಆಸ್ಪತ್ರೆಗಳೆಷ್ಟು?*

ಇ) *ಈ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ ಈ ಆಸ್ಪತ್ರೆಗಳಿಗೆ ಔಷಧಿಗಳನ್ನು ಪ್ರತಿ ತಿಂಗಳು ಒದಗಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

ಅ) 4,29,650

ಆ) 54, (ಕಾರಾವಿ ಆಸ್ಪತ್ರೆ -2, ಪೂರ್ಣಕಾಲಿಕ ಕಾರಾವಿ ಚಿಕಿತ್ಸಾಲಯಗಳು -50 ಆಯುರ್ವೇದ ಚಿಕಿತ್ಸಾಲಯಗಳು -2, ಹಾಗೂ ರೋಗ ಪತ್ತೆ ಹಚ್ಚುವ ಕೇಂದ್ರ - 1)

ಇ) ಬಂದಿದೆ.

ಈ) ಔಷಧಿಗಳನ್ನು ನಿಯತಕಾಲಿಕವಾಗಿ ಸರಬರಾಜು ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ರಾಷ್ಟ್ರೀಯ ಕ್ರೀಡೆಗಾಗಿ ಕೆನರಾ ಬ್ಯಾಂಕಿನಿಂದ ಪಡೆದ ಸಾಲ

1680 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಷ್ಟ್ರೀಯ ಕ್ರೀಡೆಗಳನ್ನು ನಡೆಸಲು ಕ್ರೀಡಾ ಸಮಿತಿಯು ಕೆನರಾ ಬ್ಯಾಂಕಿನಿಂದ ಸಾಲವನ್ನು ಪಡೆದಿಯೇ?*

ಆ) *ಹಾಗಿದ್ದಲ್ಲಿ, ಎಷ್ಟು ಹಣವನ್ನು ಮೇಲ್ಕಂಡ ಬ್ಯಾಂಕಿನಲ್ಲಿ ಪಡೆಯಲಾಗಿದೆ?*

ಇ) *ಈ ಹಣಕ್ಕೆ ಇಲ್ಲಿಯವರೆಗೆ ಕೊಡಬೇಕಾದ ಬಡ್ಡಿ ಹಣ ಎಷ್ಟು?*

ಈ) *ಸದರಿ ಸಾಲವನ್ನು ಯಾವಾಗ ಮರುಪಾವತಿ ಗೊಳಿಸಲಾಗುವುದು?*

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಹೌದು

ಆ) ರೂ. 14,87,92,948-00

ಇ) ರೂ. 7,41,89,675-00

ಈ) ಸಧ್ಯದಲ್ಲೇ ಪಾವತಿಸಲು ಪ್ರಯತ್ನಿಸಲಾಗುತ್ತಿದೆ.

ಕನ್ನಡ ಜಾಗೃತಿ ಸಮಿತಿ

1682- ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪ್ರವಾಸೋದ್ಯಮ, ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಡಳಿತ ಮಟ್ಟದಲ್ಲಿ ಈಗ ಶೇಕಡಾ ಎಷ್ಟು ಕನ್ನಡ ಗಳಿಕೆ ಆಗುತ್ತಿದೆ?

ಆ) ಆಡಳಿತ ಎಲ್ಲಾ ಹಂತಗಳಲ್ಲಿ ಸಂಪೂರ್ಣ ಕನ್ನಡ ಬಳಕೆ ಜಾರಿ ಕುರಿತು ಸರ್ಕಾರದ ಇದುವರೆಗಿನ ಕ್ರಮಗಳನ್ನು ತಿಳಿಸುವಿರಾ?

ಇ) ಕನ್ನಡ ಬಳಕೆ ಜಾರಿಗೊಳಿಸಲು ಇರುವ ಕನ್ನಡ ಜಾಗೃತಿ ಸಮಿತಿಯನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ರಚಿಸುವ ಬಗ್ಗೆ ಸರ್ಕಾರವು ನಿರ್ಧಾರ ಕೈಗೊಂಡಿದೆಯೆ?

ಈ) ಹಾಗಿದ್ದಲ್ಲಿ ವಿವರ ನೀಡುವುದು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಶೇಕಡಾ 80ರಿಂದ 95ರವರೆಗೆ ಆಡಳಿತದಲ್ಲಿ ಕನ್ನಡ ಬಳಕೆಯಾಗುತ್ತಿದೆ.

ಆ) 1) ಇದುವರೆವಿಗೆ 286 ಆದೇಶಗಳನ್ನು ಹೊರಡಿಸಿರುವುದು.

2) ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಚಿಸಿ ಶಾಸನಬದ್ಧ ಅಧಿಕಾರ ನೀಡಿರುವುದು.

3) ಅಧಿಕಾರಿ ನೌಕರರಿಗೆ ಆಗಾಗ್ಗೆ ಕನ್ನಡ ಕಾರ್ಯ ಶಿಬಿರ ನಡೆಸುತ್ತಿರುವುದು.

4) ವಿವಿಧ ಇಲಾಖೆ, ಮಂಡಳಿ, ನಿಗಮಗಳ ನೌಕರರುಗಳಿಗೆ ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯ ಸಹಯೋಗದಲ್ಲಿ ಅಂಚೆ ಮೂಲಕ ಶಿಕ್ಷಣ ನೀಡುತ್ತಿರುವುದು.

5) ಕನ್ನಡ ಬೆರಳಚ್ಚು ಯಂತ್ರ ಸರಬರಾಜು.

6) ಕಛೇರಿಗಳಿಗೆ ಕನ್ನಡ ಬಳಕೆಗೆ ಪೂರಕ ಸಾಹಿತ್ಯ ಪೂರೈಕೆ.

7) ಇಂಗ್ಲೀಷ್ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರಿಗೆ ಕನ್ನಡ ತರಬೇತಿ.